



ಭರತನಾಟ್ಯ ಪ್ರಿಯರಿಗೆ ಅತೀ ಸುಂದರವಾಗಿ ಒಪ್ಪುತ್ತದೆ. ಯಾಕೆಂದರೆ ಅವರ ಹಾವಭಾವ, ಕಾರ್ಯಕ್ರಮಗಳಲ್ಲಿ ಗುರುವಾಗಿ ಕಾರ್ಯಕ್ರಮ ನಿರ್ವಹಿಸುವಾಗ, ಹಾಡುವಾಗ ನಟ್ಟುವಾಂಗಕ್ಕೆ ಕುಳಿತಿರುವಾಗ ಎಲ್ಲಾ ಜನರ ಕಣ್ಣು ನೃತ್ಯ ಗುರುವಿನ ಮೇಲೇಯೇ ಇರುತ್ತದೆ. ಜೊತೆಗೆ ಆಭರಣದ ಮೇಲೆ ಜನರ ನೋಟ ನೆಟ್ಟಿರುತ್ತದೆ. ಅದು ಬಹಳ ಚೆನ್ನಾಗಿ ಒಪ್ಪುತ್ತದೆ. ರೇಷ್ಮೆ ಸೀರೆಗೆ ಚಂದ್ರ ಆಭರಣ ಹೇಳಿ ಮಾಡಿಸಿದಂತಿರುತ್ತವೆ.

ಈ ಚಂದ್ರ ಆಭರಣಗಳು ಎಲ್ಲಾ ಗಾತ್ರ, ಆಕಾರಗಳಲ್ಲೂ ಸಿಗುತ್ತವೆ. ಚಿಕ್ಕ ಸಮಾರಂಭಗಳಿಗೆ ಚಿಕ್ಕ ಗಾತ್ರದ್ದು ಧರಿಸಬಹುದು. ಚೂಡಿದಾರ್, ಸ್ಕರ್ಟ್ ಇತರೆ ಡ್ರೆಸ್‌ಗಳಿಗೆ ಚಿಕ್ಕದ್ದು ಪದಕ, ಓಲೆ ಧರಿಸಿದರೆ ಸೀರೆ, ಲೆಹಂಗಾ, ಲಂಗ ದಾವಣಿ, ಇಂತಹ ಬಟ್ಟೆ ಧರಿಸುವಾಗ ದೊಡ್ಡ ಗಾತ್ರದ್ದು ಧರಿಸಿದರೆ ಚಂದ. ಚಂದ್ರ ಪದಕಕ್ಕೆ ಗುಂಡು ಸರ, ಜೋಮಾಲೆ ಸರಗಳು ಬಹು ಸೊಗಸಾಗಿ ಕಾಣುತ್ತವೆ. ಕುತ್ತಿಗೆಗೆ ಗಿಡ್ಡವಾಗಿ ಧರಿಸುವವರು ರೋಪ್ ಚೈನ್, ನವಾಬ ಚೈನ್, ಕಟ್ಸ್ ಚೈನ್‌ಗಳನ್ನು ಸೇರಿಸಿ ಧರಿಸಬಹುದು. 3, 4 ಎಳೆಗಳನ್ನು ಒಟ್ಟಾಗಿ (ಎಳೆಗಳು ಸಪೂರವಾಗಿರಲಿ) ಸೇರಿಸಿ ಚಂದ್ರ ಪದಕದೊಂದಿಗೆ ಬಳಸಿ ಧರಿಸಿದರೆ ಅದೂ ತುಂಬಾ ಗ್ರಾಂಡ್ ಲುಕ್ ಕೊಡುತ್ತದೆ. ನಾವು ಆಭರಣವನ್ನು ಹೇಗೆ ಧರಿಸಿದ್ದೇವೆ ಅದರ ಮೇಲೆ ಅದರ ಲುಕ್ ನಿಂತಿರುತ್ತದೆ. 3, 4 ಎಳೆಗಳಲ್ಲೂ ಹಲವು ವಿನ್ಯಾಸಗಳಿವೆ. ಮುತ್ತನ್ನು ಹೆಣೆದ 3 ಎಳೆ, ಚಿನ್ನದ ಗುಂಡುಗಳನ್ನು ಹೆಣೆದ 3 ಎಳೆ, ನೂಲಿನಲ್ಲಿ ಪೋಣಿಸಿದ ಮಣಿಗಳ ಎಳೆಗಳು, ನಮ್ಮ ಮನಸ್ಸಿಗೆ ಮುದ ನೀಡುವ ಸರಗಳನ್ನು ಜೊತೆಗೂಡಿಸಿ ಧರಿಸಬಹುದು! ಚಿನ್ನದ ಗುಂಡುಗಳಾದರೆ ಕಟ್ಸ್ ಇರುವ ಕೊತ್ತಂಬರಿ ಗುಂಡು ಅತೀ ಹೊಳಪನ್ನು ನೀಡುತ್ತದೆ.

ಚಂದ್ರ ಪೆಂಡೆಂಟನ್ನು ಮುಂದಲೆಯಾಗಿಯೂ ಬಳಸಬಹುದು. ಇತ್ತೀಚೆಗಿನ ಟ್ರೆಂಡ್ ಹೇಗಿದೆ ಅಂದರೆ ಮುಂದಲೆಯ ಹಿಂಬದಿ ಚೈನು ಕಾಣಬಾರದು. ಕೂದಲ ಒಳ ಭಾಗದಿಂದ ಪದಕ ಮಾತ್ರ ಹಣೆಯಲ್ಲಿ ಕಾಣಬೇಕು. ಅದು ಬಹಳ ಸ್ಟೈಲಿಶ್ ಆಗಿ ಕಾಣುತ್ತದೆ. ತರುಣಿಯರಂತೂ ಹುಕ್ ಅನ್ನು ಕೂದಲಿನಿಂದ ಆವೃತವಾಗುವಂತೆ ನೋಡಿಕೊಳ್ಳುತ್ತಾರೆ. ಈ ಚಂದ್ರ ವಿನ್ಯಾಸ ಅದಕ್ಕೂ ಬಹಳ ಒಪ್ಪುತ್ತದೆ.

## ಮಲ್ಟಿ ಪರ್ಪಸ್ ಒಡವೆ

ಮುಂಗೈ ಸರಪಳಿ (ಬ್ರೇಸ್ಲೆಟ್) ಆಗಿ ಇದನ್ನು ಬಳಸಬಹುದು. ಅದೇ ಚೈನನ್ನು ಬಳಸಿ ಚೋಕರ್ ಆಗಿ ಕುತ್ತಿಗೆಗೂ ಬಳಸಬಹುದು. ಚೈನು ಮಾತ್ರ ಅಗಲವಾಗಿ ಚಪ್ಪಟೆ ಆಕಾರದ್ದಾದರೆ ಒಳ್ಳೆಯದು. ಹಿಂದೆ ರಿಂಗ್ ಚೈನ್ ಸ್ವಲ್ಪ ಜಾಸ್ತಿ ಇರಲಿ.

ಈ ಚಂದ್ರ ವಿನ್ಯಾಸದಲ್ಲಿ ಕೆಂಪು ರೂಬಿ, ಎಮರಾಲ್ಡ್, ಮುತ್ತುಗಳನ್ನು ಪೋಣಿಸಿದ್ದು ನಮ್ಮ ನಮ್ಮ ಇಚ್ಛಾನುಸಾರ ಧರಿಸಬಹುದು. ಚಿಕ್ಕ ಚಿಕ್ಕ ಮಣಿಗಳು ಹುದುಗಿದ್ದು, ಅದ್ಭುತವಾದ ವಿನ್ಯಾಸವಾಗಿದೆ. ಮೌಲ್ಯವನ್ನು ನೋಡುವುದಾದರೆ ರತ್ನಗಳು ಬೇಡ ಎಂದಾದರೆ ಕ್ಯೂಬಿಕ್ ಝಿರ್ಕೋನಿ ಹರಳುಗಳನ್ನು ಬಳಸಬಹುದು! ನೋಡಲು ಸರಿ ಸುಮಾರು ರತ್ನಗಳಂತೆಯೇ ಇದ್ದು ಇದೂ ಕೂಡ ಆಕರ್ಷಕವಾಗಿ ಇರುತ್ತದೆ.

ಹೆಸರಿನಲ್ಲೇ ಇರುವಂತೆ ಚಂದ್ರ ವಿನ್ಯಾಸದ ಆಭರಣಗಳು ಪ್ರಕಾಶಮಾನವಾಗಿ ಕಾಣುತ್ತವೆ. ಇನ್ನೂ ಮ್ಯಾಚಿಂಗ್ ಬೇಕು ಎನ್ನುವವರು ಕೈಗೆ ಉಂಗುರ, ಸೊಂಟಕ್ಕೆ ಒಡ್ಯಾಣ, ಬಳೆಗಳಲ್ಲೂ ಈ ವಿನ್ಯಾಸವನ್ನು ಅಳವಡಿಸಿ ಮಾಡಿಸಿ ಧರಿಸಬಹುದು. ನಮ್ಮಲ್ಲಿರುವ ಆಭರಣಗಳು ವಿಭಿನ್ನವಾಗಿ ಕಾಣುವಂತೆ ಮುತುವರ್ಜಿಯಿಂದ ನಾವೇ ನೋಡಿಕೊಂಡು ಧರಿಸಬೇಕು. ಸಂತಸ ಪಡಬೇಕು.

ಭಾವನಾತ್ಮಕವಾಗಿ ಆಭರಣ ಮತ್ತು ಹೆಂಗಳೆಯರಿಗೆ ಒಂದು ಸಂಬಂಧವಿದೆ. ಆಭರಣ, ಕಂಠಾಭರಣ, ಕೈಯಾಭರಣ, ಕಿವಿಯಾಭರಣವಾಗಿ ಸದಾ ಶೋಭಿಸಲಿ, ಮಕ್ಕಳಿಗೂ ತೊಡಿಸುವಾಗ ಸದಾ ಚಿಕ್ಕ ಆಭರಣವನ್ನು ತೊಡಿಸುವುದು ಉತ್ತಮ. ಯಾಕೆಂದರೆ ಕಿವಿಗೂ ಹಿತವಾಗಿರುತ್ತದೆ ಮಕ್ಕಳು ತಾವು ತೊಟ್ಟ ಆಭರಣದಲ್ಲಿ ಸದಾ ಆಡುತ್ತಿರುತ್ತಾರೆ. ಅದು ಬಿದ್ದು ಹೋಗುವ ಸಂದರ್ಭವೂ ಇರುತ್ತದೆ. ಹುಕ್, ಬೆಸುಗೆ ಸರಿಯಾಗಿ ಇದೆಯೇ ಎಂದು ನೋಡಿ ಭದ್ರವಾಗಿ ಮಕ್ಕಳಿಗೆ ತೊಡಿಸಿ.